AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ವಚನ ಸಾಹಿತ್ಯದ ಸಾಮಾಜಿಕ ಆಯಾಮಗಳು

**ಡಾ. ವೈ. ಎ. ದೇವಋಷಿ**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸಿ.ಬಿ. ಕಾಲೇಜು ಭಾಲ್ಕಿ
ಬೀದರ ಜಿಲ್ಲೆ
ಕರ್ನಾಟಕ ರಾಜ್ಯ–585328.

**Abstract:**

ವಚನ ಸಾಹಿತ್ಯ ರಚನೆ ಭಾರತೀಯ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಜೀವನಗಳಲ್ಲಿ ಬದಲಾವಣೆಗಳನ್ನು ತರುವ ಚಳುವಳಿಯಾಗಿ ಮಾರ್ಪಟ್ಟಿತ್ತು. ವಚನ ಸೃಷ್ಟಿ ಒಂದು ಅನನ್ಯ ಪ್ರಯೋಗ. ಸಮಾಜದ ಎಲ್ಲ ವರ್ಗಗಳ, ವರ್ಣಗಳ ಶರಣ ಸಮುದಾಯ ಬಸವಣ್ಣನವರ ಮುಂದಾಳತ್ವದಲ್ಲಿ ಕೈಗೊಂಡ ವ್ಯಕ್ತಿ ಕಲ್ಯಾಣ ಮಾತ್ತು ಸಮಾಜ ಕಲ್ಯಾಣ ಚಳುವಳಿಯನ್ನು ಹುಟ್ಟುಹಾಕಿದ್ದು ಈ ವಚನಗಳೇ. ವಚನಕಾರರು ವಚನಗಳ ಮೂಲಕ ಕಾಯಕ, ದಾಸೋಹ, ಸಮಾನತೆ ಮುಂತಾದ ತತ್ವಗಳನ್ನು ವಿಶ್ವಕ್ಕೆ ನೀಡಿದರು. ವ್ಯಕ್ತಿ ಕಲ್ಯಾಣ ಮತ್ತು ಸಮಾಜ ಕಲ್ಯಾಣಕ್ಕಾಗಿ ಅವರು ಕೈಕೊಂಡ ಜನಪರ ಆಂದೋಲನ ನಮ್ಮ ನಾಡಿನ ವಿಶಿಷ್ಟ ಸಾಧನೆ.

**Key words:** ಸಾಮಾಜಿಕ ಸಮಾನತೆ, ಕಾಯಕ, ದಾಸೋಹ, ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣ.

Introduction: ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರು ನಡೆಸಿದ ಆಂದೋಲನ ಮಹತ್ವಪೂರ್ಣವಾದದ್ದು. ಇದು ಕರ್ನಾಟಕದಲ್ಲಿ ಅಷ್ಟೇ ಅಲ್ಲದೇ ಭಾರತದಲ್ಲೇ ವೈಶಿಷ್ಟ್ಯಪೂರ್ವವಾದದ್ದು. ಈ ಆಂದೋಲನ ಎಲ್ಲ ವರ್ಣ, ಜಾತಿ, ವರ್ಗಗಳ ಜನರನ್ನು ಒಳಗೊಂಡಿತ್ತು. ಶರಣರ ಚಳುವಳಿ ಅಳವಡಿಸಿಕೊಂಡ ಬಹು ಮುಖ್ಯವಾದ ಮೌಲ್ಯವೆಂದರೆ ಸಾಮಾಜಿಕ ಸಮಾನತೆ. ಎಲ್ಲ ಜೀವರನ್ನು ಸಮಾನವೆಂದು ಪರಿಗಣಿಸುವುದು ಮತ್ತು ಸಕಲ ಜೀವಾತ್ಮ–ರಿಗೆ ಲೇಸನ್ನು ಬಯಸುವುದು. ಸಮಾನತೆ ಎಂಬುದು ಸಾಮಾಜಿಕ ಸಂದರ್ಭದಲ್ಲಿನ ಸ್ಥಿತಿಯಾದ್ದರಿಂದ ಸಮಾಜ ಮತ್ತು ವ್ಯಕ್ತಿಗಳ ನಡುವಣ ಸಂಬಂಧವನ್ನು ಶರಣರು ಖಚಿತಪಡಿಸಿದರು. "ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ವ್ಯಕ್ತಿ ಪಡೆಯುವ ಸಮಾನಾವಕಾಶಗಳು ಸಾಮಾಜಿಕ ಸಂಧರ್ಭದಲ್ಲಿ ವ್ಯಕ್ತವಾಗಬೇಕಾಗುವುದ–ರಿಂದ ವ್ಯಕ್ತಿ ಸಮಾಜದ ಒಂದು ಭಾಗವಾಗಿ ನಿರ್ವಹಿಸುವ ಪಾತ್ರ ಮತ್ತು ಸಮಾಜ ವ್ಯಕ್ತಿಗೆ ಬದಗಿಸುವ ಸುಭದ್ರತೆ ಇವುಗಳ ಬಗ್ಗೆ ಶರಣರಿಗೆ ಖಚಿತವಾದ ಕಲ್ಪನೆಯಿತ್ತು".[1] ಶರಣರು ನೀಡಿದ ಸಾಮಾಜಿಕ ನಡಾವಳಿ ಎಂದರೆ ಪಂಚಾಚಾರಗಳು. ಅವುಗಳೆಂದರೆ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಮತ್ತು ಭೃತ್ಯಾಚಾರಗಳು. ನಂಬಿಕೆಯ ಸಮಾನ ಮನಸ್ಕತೆ, ಕಾಯಕದಿಂದ ಜೀವನ, ಸಮೂದಾಯದ ಇತರರನ್ನು ಸಮಾನರನ್ನಾಗಿ ಕಾಣುವ ದೃಷ್ಟಿ, ಎಲ್ಲರನ್ನು ಒಂದುಗೂಡಿಸುವ ಪ್ರಯತ್ನ, ಹೀಗೆ ಶರಣರು ಸಮಾನತೆಯ ಮೂಲದಿಂದ ಸಮಾಜ ಸಂಘಟನೆಗೆ ಪ್ರಯತ್ನಿಸಿದರು.

ಸಮಾಜ ವ್ಯಕ್ತಿಗಳಿಂದ ನಿರ್ಮಿತವಾದದ್ದು. ಅಂದಿನ ಸಾಮಾಜಿಕ ವ್ಯವಸ್ಥೆ ವ್ಯಕ್ತಿಯ ಪೂರ್ಣ ವಿಕಾಸಕ್ಕೆ ಅಡ್ಡಿಯಾಗಿ ನಿಂತಿತ್ತು. ಕೃತಕ ವಿಭಜನೆಗಳನ್ನು ಕಂಡು ಶರಣರು ಸಿಡಿದು ನಿಂತರು. ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳು ಇದ್ದವು, ಅಲ್ಲದೆ ಅಸ್ಪೃಶ್ಯತೆ ಎಂಬ ಪಂಚಮ ವರ್ಣವೂ ಹಿಂದೂ ಧರ್ಮಕ್ಕೆ ಅಂಟಿದ ಕಳಂಕ ಎಂದು ಸಾರಿ ಹೇಳುತಿತ್ತು. ಉತ್ತಮರೆನಿಸಿಕೊಂಡವರು ಧರ್ಮವನ್ನು ತಮ್ಮ ಸ್ವಂತದ ಸ್ವತ್ತಾಗಿ ಮಾಡಿಕೊಂಡು ಸಾಮಾನ್ಯ ಜನರನ್ನು ವಂಚಿಸುತ್ತಿದ್ದರು. ಧರ್ಮ ಸ್ವಾರ್ಥ ಸಾಧನೆಯ ಮುಖವಾಡವಾಗಿತ್ತು. ಸಮಾಜದಲ್ಲಿ ಮೇಲು–ಕೀಳು ಎಂಬ ಭೇಧಭಾವಗಳು ಬೆಳೆದು ಸಾಮಾನ್ಯ ಜನರ ಶೋಷಣೆ ನಿರಂತರವಾಗಿ ನಡೆಯುತ್ತಿತ್ತು, ಇದನ್ನು ಶರಣರು ವಿರೋಧಿಸಿದರು.

ಕೊಲ್ಲುವವನೆ ಮಾದಿಗ. ಹೊಲಸು ತಿಂಬುವನೆ ಹೊಲೆಯ
ಕುಲವೇನೋ ಆವಂದಿರ ಕುಲವೇನೋ:
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೆಲ್ಲ ಕುಲಜರು.

ಎಂದು ಹೇಳಿದ ಬಸವಣ್ಣನವರು; ವ್ಯಕ್ತಿಯ ನಡೆ ನುಡಿಗಳಿಂದ ಅವನ ಜಾತಿ ನಿರ್ಧರಿಸಲ್ಪಡುತ್ತದೆಯೇ ವಿನಹ ಹುಟ್ಟಿನಿಂದಲ್ಲ ಎಂದು ಹೇಳುವ ಮೂಲಕ ಸಮಾಜದಲ್ಲಿನ ಜಾತಿ ವ್ಯವಸ್ಥೆಯನ್ನು ಖಡಾಖಂಡಿತವಾಗಿ ಖಂಡಿಸಿದರು. ಸಮಾಜದಲ್ಲಿ ಮೇಲು ಜಾತಿ–ಕೀಳು ಜಾತಿ ಎಂಬ ಸ್ಥರಗಳಲ್ಲದೆ; ಲಿಂಗ ತಾರತಮ್ಯವೂ ಇತ್ತು. ಪುರುಷರು–ಮಹಿಳೆಯರು ಎಂಬ ಭೇದಭಾವ, ಸ್ತ್ರೀಯರನ್ನು ಕನಿಷ್ಟವಾಗಿ ಕಾಣುವ ಮನೋಧರ್ಮ ಸಮಾಜದಲ್ಲಿತ್ತು ಇದನ್ನು ಶರಣರು ಅಲ್ಲಗಳೆಯುತ್ತಾರೆ.

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ನಡುವೆ ಸುಳಿವಾತ್ಮನು ಗಂಡೂ ಅಲ್ಲ
ಹೆಣ್ಣೂ ಅಲ್ಲ ರಾಮನಾಥ

ದೇಹದ ಒಳಗಿರುವ ಚೈತನ್ಯಕ್ಕೆ ಭೇದವಾಗಲಿ, ಒಡೆಯ–ಸೇವಕನೆಂಬ ಭಿನ್ನತೆಯಾಗಲಿ ಇಲ್ಲ, ಅದಕ್ಕಾಗಿ ಪುರುಷ ಶ್ರೇಷ್ಠನೂ ಅಲ್ಲ, ಸ್ತ್ರೀ ಕನಿಷ್ಠವೂ ಅಲ್ಲ, ಇವರಿರ್ವರೂ ಸಮಾನರು. ಸ್ತ್ರೀ ಪುರುಷರು ಇಬ್ಬರೂ ಜ್ಞಾನದ ಶಕ್ತಿ. ಅವರಲ್ಲಿನ ವ್ಯಕ್ತಿತ್ವದ ಶಕ್ತಿಗಳ ಸಮಾನತೆಯನ್ನು ಹನ್ನೆರಡನೆಯ ಶತಮಾನದ ಶರಣರು ಮೂಡಿಸಿದರು. ಹೆಣ್ಣು ಮಾಯೇ ಅಲ್ಲ. ಎಂಬ ವಿಚಾರವನ್ನು ಶರಣರು ಪ್ರತಿಪಾದಿಸಿದರು. ಹನ್ನೆರಡನೆಯ ಶತಮಾನ ಜಾತಿ ವ್ಯವಸ್ಥೆಯೆಂಬ ವಿಷ

ತುಂಬಿದ ಕೊಡಪಾನದಂತಿತ್ತು. ಜಾತಿಯ ಬೇರುಗಳು ಸಮಾಜದ ಆಳದಲ್ಲಿ ಇಳಿದಿದ್ದವು. ಇದನ್ನು ಮಾದಾರ ಚನ್ನಯ ಹೀಗಳೆಯುತ್ತಾನೆ.

ನಡೆ ನುಡಿ ಸಿದ್ಧಾಂತವಾದಲ್ಲಿ ಕುಲ ಹೊಲೆಯಿಲ್ಲ:
ನುಡಿ ಲೇಸು; ನಡೆಯಧಮವಾದಲ್ಲಿ ಅದೇ ಬಿಡುಗಡೆ
ಇಲ್ಲದ ಹೊಲೆ, ಕಳವುಪರದಾರಂಗಳಲ್ಲಿ ಹೊಲಬನರಿಯದೆ.
ಕೆಟ್ಟು ನಡೆವುತ್ತ ಮತ್ತೆ ಕುಲಜರೆಂಬ ಒಡಲುಂಟೇ?
ಆಚಾರವೇ ಕುಲ, ಅನಾಚಾರವೇ ಹೊಲೆ
ಇಂತೀ ಉಭಯವ ತಿಳಿದು ಅರಿಯಬೇಕು.
ಕಯ್ಯುಳಿಗತ್ತಿ ಅಡಿಗೂಂಟಿಕಡೆಯಾಡಬೇಡ,
ಅರಿ ನಿಜಾತ್ಮ ರಾಮನಾ.

'ಆಚಾರವೇ ಕುಲ; ಅನಾಚಾರವೇ ಹೊಲೆ' ಎಂದು ಘೋಷಿಸಿದ ಶರಣರು ಅದರಂತೆ ಆಚರಿಸಿದರು. ಅಸ್ಪೃಶ್ಯರನ್ನು ಅನುಭವ ಮಂಟಪದಲ್ಲಿ ಸೇರಿಸಿಕೊಂಡು ಅವರಿಗೂ ತಮ್ಮಷ್ಟೇ ಸಮಾನ ಅವಕಾಶಗಳನ್ನು ಕೊಟ್ಟರು. ಸಮಾನತೆ ತರುವುದಕ್ಕಾಗಿ ಬಸವಣ್ಣನವರು ಹರಳಯ್ಯ ಮತ್ತು ಮಧುವಯ್ಯನ ಮಕ್ಕಳಿಗೆ ಅಂತರಜಾತಿಯ ವಿವಾಹ ಮಾಡಿಸಿದ್ದು, ಶರಣರ ನಡೆ-ನುಡಿಗೆ ಹಿಡಿದ ಕನ್ನಡಿಯಾಗಿದೆ. ಆದರೆ ವರ್ಣಸಂಕರವಾಯಿತೆಂದು ವಿರೋಧ ಶಕ್ತಿಗಳು ರಾಜನಿಗೆ ದೂರುಕೊಟ್ಟರು. ಅಂದಿನ ಸಮಾಜದಲ್ಲಿ ಬಸವಣ್ಣನವರ ಸಾಮಾಜಿಕ ಸಮಾನತೆಯ ವಿರೋಧಿಗಳು ಸಾಕಷ್ಟಿದ್ದರು. ಮೇಲು-ಕೀಳೆಂಬ ಭಾವನೆಯಿಲ್ಲದೆ. ಸದ್ಗುಣಗಳಿಂದ ವ್ಯಕ್ತಿಯ ಯೋಗ್ಯತೆಯನ್ನು ನಿರ್ಧರಿಸಿ ಎಲ್ಲರಿಗೂ ಸಮಾನ ಅವಕಾಶಗಳು ದೊರೆಯುವಂತಹ ಆದರ್ಶ ಸಮಾಜ ನಿರ್ಮಿಸಬೇಕೆಂಬ ಮಹತ್ವದ ಉದ್ದೇಶ ಶರಣರದ್ದಾಗಿತ್ತು. ಜೀವನ ನಿರ್ವಹಣೆಗಾಗಿ ಕೈಕೊಂಡ ವೃತ್ತಿಗಳಿಂದಲೇ ವ್ಯಕ್ತಿಯ ಯೋಗ್ಯತೆಗಳನ್ನು ಅಳೆಯುವ ಸಾಮಾಜಿಕ ಮನೋಧರ್ಮವನ್ನು ಬದಲಾಯಿಸಲು ಶರಣರು ಪ್ರಯತ್ನಿಸಿದರು. ಕೈಕೊಳ್ಳುವ ಉದ್ಯೋಗದಲ್ಲಿ ಮೇಲು-ಕೀಳು ಎಂಬುದಿಲ್ಲ. ಶರಣರು ತಮ್ಮ ವಚನಗಳ ಮೂಲಕ ಉದ್ಯೋಗಗಳನ್ನು ಕಾಯಕವಾಗಿ ಮಾರ್ಪಡಿಸಿದರು. ಸಮಾಜದ ಆರ್ಥಿಕ ವ್ಯವಸ್ಥೆಯ ಸುಧಾರಣೆಗೆ ಕಾಯಕ ಅವಶ್ಯ. ಕಾಯಕವಿಲ್ಲದ ಬದುಕು ವ್ಯರ್ಥ. ದುಡಿಯದೆ ಉಣ್ಣುವ ಹಕ್ಕಿಲ್ಲ. ಪ್ರತಿಯೊಬ್ಬರೂ ದುಡಿದು ಚೆನ್ನಾಗಿ ಬದುಕಬೇಕು. ದುಡಿಮೆಯ ಫಲವನ್ನು ತಾನಷ್ಟೇ ಬಳಸದೆ ದಾಸೋಹಕ್ಕೆ ವಿನಿಯೋಗಿಸಬೇಕು. ಆಗ ದುಡಿಮೆ ಕಾಯಕವಾಗುತ್ತದೆ. ಎಂದು ಹೇಳುವ ಮೂಲಕ ಶರಣರು 'ಕಾಯಕವನ್ನು ಕೈಲಾಸ'ವೆಂದು ಕರೆದರು.

ಸಮಾಜ ಸ್ವಯಂಪೂರ್ಣವಾಗಬೇಕಾದರೆ ಮತ್ತು ಸುಖಮಯವಾಗಬೇಕಾದರೆ ಸಮಾಜದ ಜೀವಿಗಳೆಲ್ಲರೂ ಕಾಯಕ ಮಾಡಬೇಕು, ಎಂದು ಕಾಯಕದ ಮಹತ್ವವನ್ನು ಶರಣರು ತಮ್ಮ ವಚನಗಳಲ್ಲಿ ಸಾರಿ ಹೇಳಿದರು. ಭಕ್ತನಾಗಿರಲಿ, ಗುರುವಾಗಿರಲಿ, ಜಂಗಮನಾಗಿರಲಿ ಎಲ್ಲರೂ ತಮ್ಮ ತಮ್ಮ ಕಾಯಕದಲ್ಲಿ ನಿರತರಾಗಿ ಸಾಧನೆ ಮಾಡಬೇಕು ಎಂದು ನುಲಿಯ ಚಂದಯ್ಯ ತನ್ನ ವಚನದಲ್ಲಿ ಹೀಗೆ ಹೇಳಿದ್ದಾನೆ-

ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ;
ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು:
ಜಂಗಮವಾದಡೂ ಕಾಯಕದಿಂದಲೇಷದ ಪಾಶ ಹರಿವುದು:
ಇದು ಚನ್ನಬಸವಣ್ಣ ಪ್ರಿಯ ಚಂದೇಶ್ವರ ಲಿಂಗದ ಅರಿವು.

"ಸಮಾಜದ ಹಸಿವು ಹಿಂಗುವುದು ಕಾಯಕದಿಂದಲೆ. ಕಾಯಕದಿಂದ ಹಸಿವಿನ ಸಮಸ್ಯೆ ಪರಿಹರಿಸಿಕೊಳ್ಳಲು ಸಾಧ್ಯ. ಕಾಯಕದಿಂದ ವ್ಯಕ್ತಿ ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗುತ್ತದೆ. ಕಾಯಕರಹಿತ ಚಿಂತನೆಯ ಟೊಳ್ಳುತನವನ್ನು ಶರಣರು ಟೀಕಿಸಿದರು. ವ್ಯಕ್ತಿ ಹಿತ ಹಾಗೂ ಸಮಾಜ ಹಿತವನ್ನು ಸಮಾನವಾಗಿ ಪರಿಗಣಿಸಿದ್ದ ಅವರು ಕಟ್ಟಿಕೊಟ್ಟ ಕಾಯಕ ನೆಲೆ ಸರ್ವಸಮಾನತೆಯ ಸಾಮಾಜಿಕ ಚಿಂತನೆ. ಅದು ಇಂದಿಗೂ ಪ್ರಸ್ತುತವಾಗಿದೆ."[2]

ಬೆವರು ಸುರಿಸುವ ಸಮಾಜವೇ ಈ ಜಗತ್ತಿನಲ್ಲಿ ಅತ್ಯಂತ ಸುಂದರ ಸಮಾಜವಾಗಿದೆ. ಬೆವರಿನ ಸಂಸ್ಕೃತಿಯ ಮಹತ್ವ ಅರಿತವನೇ ಈ ಜಗತ್ತಿನಲ್ಲಿ ಅತ್ಯಂತ ಸುಂದರನೂ ಹಾಗೂ ರಚನಾತ್ಮಕ ವ್ಯಕ್ತಿಯೂ ಆಗಿರುತ್ತಾನೆ. "ಕಾಯಕವೆಂಬ ಮಾತು ಕೇವಲ ಉದರ ನಿಮಿತ್ತ ಕೈಗೊಂಡ ಉದ್ಯೋಗ ಎಂಬುದಷ್ಟೇ ಅರ್ಥವಲ್ಲ, ಕೈಕೊಂಡ ಕಾಯಕ ಸಮಾಜಕ್ಕೆ ಹಾನಿಕಾರಕವಾಗಿರಬಾರದು, ಅದು ಸಮಾಜದ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು. ಅದರ ಫಲ ತನಗೆ ಮಾತ್ರವಲ್ಲದೆ ಸಮಾಜಕ್ಕೂ ದೊರೆಯಬೇಕು."[3] ಎಂಬುದು ಶರಣರ ಆಶಯವಾಗಿತ್ತು. ಶರಣರು ತಮ್ಮ ವಚನಗಳಲ್ಲಿ ಸಮಾಜದಲ್ಲಿನ ಡಂಭಾಚಾರದ ಭಕ್ತಿಯನ್ನು ಖಂಡಿಸಿದರು. ಮೂರ್ತಿ ಪೂಜೆ, ತೀರ್ಥಯಾತ್ರೆ, ಮಠ ಮಂದಿರಗಳ ಸಂಸ್ಕೃತಿ ಮುಂತಾದ ಜಡ ಆಚಾರಣೆಗಳ ಮೂಲಕ ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ನಡೆಯುವ ಮುಗ್ಧರ ಶೋಷಣೆಯನ್ನು ಶರಣರು ಖಂಡಿಸುತ್ತಾರೆ. ಮೂರ್ತಿ ಪೂಜೆಯನ್ನು ಅಲ್ಲಗಳೆದು 'ದೇಹವೇ ದೇಗುಲ' ಎಂದು ಸಾರಿದರು. 'ಶರಣ ಸತಿ ಲಿಂಗ ಪತಿ'ಯಾಗಿಸಿದರು. ಸಮಾಜದಲ್ಲಿನ ಜಡ ಸಂಸ್ಕೃತಿಯನ್ನು ಒಡೆಯುವುದಕ್ಕಾಗಿ ಶರಣರು ಪ್ರಯತ್ನಿಸಿದರು. ಸಮಾಜದಲ್ಲಿನ ಮೂಢನಂಬಿಕೆಗಳು. ಅಂಧ ಶ್ರದ್ಧೆಗಳು ವ್ಯಕ್ತಿ ಜೀವನವನ್ನು ಘಾಸಿಗೊಳಿಸಿದ್ದವು. ಬಸವಣ್ಣನವರ ನೇತೃತ್ವದಲ್ಲಿ ಶರಣರೆಲ್ಲ ಸೇರಿ ವೈದಿಕ ಸಂಸ್ಕೃತಿಯ ಜಡತೆಯನ್ನು ತೊಡೆದು ಅಂಧಾಚಾರಗಳಿಂದ ಸಮಾಜವನ್ನು ವಿವೇಕಶೀಲತೆಯ ಕಡೆಗೆ ಕೊಂಡೊಯ್ಯುವ ಪ್ರಯತ್ನವನ್ನು ವಚನ ಸಾಹಿತ್ಯ ಮೂಲಕ ಮಾಡಿದರು.

ಸುಂದರ ಸಮಾಜ ನಿರ್ಮಾಣವಾಗಬೇಕಾದರೆ ಸಮಾಜದ ವ್ಯಕ್ತಿಗಳು ಸಜ್ಜನರಾಗಿರಬೇಕು. ವಿವೇಕಶೀಲತೆ ಮತ್ತು ಉತ್ತಮ ವ್ಯಕ್ತಿತ್ವವನ್ನು ಹೊಂದಿರಬೇಕು. ಜಾತಿ ವ್ಯವಸ್ಥೆ, ಲಿಂಗ ತಾರತಮ್ಯ. ಕಾಯಕ ನಿಷ್ಠೆಯ ಕೊರತೆ ಇವು ಸಮಾಜಕ್ಕೆ ರೋಗಗಳಿದ್ದಂತೆ, ಈ ರೋಗಕ್ಕೆ ಚಿಕಿತ್ಸೆ ಎಂದರೆ ವ್ಯಕ್ತಿಯ ವ್ಯಕ್ತಿತ್ವ. ಈ ವ್ಯಕ್ತಿತ್ವ ನಿರ್ಮಾಣಕ್ಕಾಗಿ ಬಸವಣ್ಣನವರು ಸಪ್ತಸೂತ್ರಗಳನ್ನೊಳಗೊಂಡ ಒಂದು ವಚನ ಹೇಳುತ್ತಾರೆ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರು ಹಳಿಯಲೂ ಬೇಡ
ಇದೆ ಅಂತರಂಗ ಶುದ್ಧಿ, ಇದೆ ಬಹಿರಂಗ ಶುದ್ಧಿ
ಇದೆ ನಮ್ಮ ಕೂಡಲಸಂಗಮ ದೇವರನೊಲಿಸುವ ಪರಿ

ಸಾಮಾಜಿಕ ಪ್ರಗತಿಗೆ ಆರ್ಥಿಕತೆ ಬಹು ಮುಖ್ಯ ಎಂದು ಶರಣರು ಅರಿತು ದಾಸೋಹ ತತ್ವವನ್ನು ಪ್ರಚುರಪಡಿಸಿದರು. ಸತ್ಯ ಶುದ್ಧ ಕಾಯಕ ಮಾಡಿ, ಗುರು, ಲಿಂಗ, ಜಂಗಮಕ್ಕೆ ಸಲ್ಲಿಸಿ ದಾಸೋಹ ಮಾಡುವುದು ಶರಣರ ತತ್ವ. ಶರಣನಾದವನು ಸಮಾಜ ಜೀವಿಯಾಗಿರುವುದರಿಂದ ಸಮಾಜದ ಒಳಿತಿಗಾಗಿ ಕಾಯಕದಿಂದ ಬಂದ ಫಲದ ಒಂದು ಭಾಗವನ್ನು ಸಮಾಜಕ್ಕೆ ಸಲ್ಲಿಸುವುದು ಶರಣ ಧರ್ಮ. ದಾಸೋಹ ಮಾಡದವನ ಧನ; ಪಾಪಿಯ ಧನ. ಅದು ಸತ್ಪಾತ್ರಕ್ಕೆ ಸಲ್ಲದು. ಶರಣರ ದಾಸೋಹ ತತ್ವ ಸಮಾಜ ಮುಖಿ ಚಿಂತನೆಯಾಗಿದೆ.

ಶರಣರು ಸಮಾಜ ಉದ್ಧಾರದ ಮಾರ್ಗವನ್ನು ತಮ್ಮ ವಚನಗಳ ಮೂಲಕ ತೋರಿಸಿದ್ದಾರೆ. ಮನುಷ್ಯ ಚೆನ್ನಾಗಿ ಬದುಕಬೇಕು. ಚೆನ್ನಾಗಿ ಬಾಳಬೇಕು. ಬದುಕು ಚಿರಂತನವಾದ ಬದುಕಿಗೆ ಸಹಾಯಕವಾಗಿದೆ. ಉದ್ಯೋಗಗಳಲ್ಲಿ ಮೇಲು-ಕೀಳು ಎಂಬುದಿಲ್ಲ. ಎಲ್ಲ ಉದ್ಯೋಗಗಳಿಂದ ಸಮಾಜ

ಸ್ವಯಂ ಪೂರ್ಣವಾಗಬೇಕು. ಸಮೃದ್ಧ ಸಮಾಜವಾಗಬೇಕು ಎಂದು ಶರಣರು ಆಶಿಸಿದ್ದರು. ಜಾತಿ ಭೇದಗಳಿಂದ ಛಿದ್ರವಾದ ಸಮಾಜವನ್ನು ಸಂಘಟಿಸಲು ಶರಣರು ಪ್ರಯತ್ನಿಸಿದರು. ಸಮಾಜದಲ್ಲಿ ಬಡವ–ಶ್ರೀಮಂತ ಎಂಬ ಭೇದವಿಲ್ಲದೆ, ಶ್ರೇಷ್ಠ–ಕನಿಷ್ಠವೆಂಬ ಭಿನ್ನತೆಯಿಲ್ಲದೆ, ಸ್ತ್ರೀ–ಪುರುಷರೆಂಬ ತಾರತಮ್ಯವಿಲ್ಲದೆ ಎಲ್ಲರೂ ಸಮಾನರಾಗಿ ಜೀವನದ ಗುರಿಯನ್ನು ಕಂಡುಕೊಳ್ಳುವ ಸಮಾಜವನ್ನು ನಿರ್ಮಿಸಲು ಶರಣರು ಶ್ರಮಿಸಿದರು. 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎಂಬ ತತ್ವದ ಮೇಲೆ ಸರ್ವರಿಗೂ ಒಳಿತಾಗುವ ಸಮಾಜ ಪರಿಪೂರ್ಣ ಸಮಾಜವೆಂದು ಶರಣರು ತಮ್ಮ ವಚನಗಳಲ್ಲಿ ಸಾರಿದರು ಮತ್ತು ಅದನ್ನು ಸಾಧಿಸಿ ತೋರಿಸಿದರು.

**ಅಡಿ ಟಿಪ್ಪಣಿಗಳು:**

1) ವಚನ ನಿರ್ವಚನ : ಡಾ. ಪಿ. ವಿ. ನಾರಾಯಣ : 1990: ಪುಟ–171

2) ಶರಣರು ಮತ್ತು ಸಂತರ ಸಾಮಾಜಿಕ ಕಾಳಜಿ: ಡಾ. ಕಾಶಿನಾಥ ಅಂಬಲಗೆ: 2006: ಪುಟ–26

3) ಶರಣರ ಅನುಭಾವ ಸಾಹಿತ್ಯ: ಡಾ. ಎಚ್. ತಿಪ್ಪೇರುದ್ರಸ್ವಾಮಿ: 1998: ಪುಟ–142